





# ವೈದ್ಯರ ಮನೆ ಹಿತ್ತಲಲ್ಲಿ ಸಸ್ಯಕಾಶಿ!

**ಮೈಸೂರಿನ ಈ ವೈದ್ಯರು ಸಾವಿರಾರು ಜನರಿಗೆ ಶಸ್ತ್ರಚಿಕಿತ್ಸೆ ಮಾಡಿದ್ದಾರೆ. ಹಾಗೆಯೇ ತಮ್ಮ ಮನೆ ಹಿತ್ತಲಲ್ಲಿ ನೂರಾರು ಬಗೆಯ ಹಣ್ಣುಗಳಿಗೆ ಕಸಿ ಮಾಡಿ ನಂದನವನವನ್ನೇ ಸೃಷ್ಟಿಸಿದ್ದಾರೆ.**

★ ಚಿತ್ರ- ಲೇಖನ: ವಿ. ಬಾಲಕೃಷ್ಣ ಶಿರ್ವ



ಮೈಸೂರಿನಿಂದ 8 ಕಿ.ಮೀ. ದೂರವಿರುವ ಶ್ರೀರಾಂಪುರದಲ್ಲಿ ಡಾ.ಮೃತ್ಯುಂಜಯರವರ 'ಸಂತೃಪ್ತಿ' ಎಂಬ ತೋಟವಿದೆ. ಭರಪೂರ ವಿದೇಶಿ, ದೇಶಿ ಹಣ್ಣು, ಹೂಗಳ ಮತ್ತು ಔಷಧಿ ಸಸ್ಯಗಳ ಅದ್ಭುತ ಕೈತೋಟವಿದು. ಇರುವ ನಿವೇಶನ 120 ಅಡಿ ಉದ್ದ ಮತ್ತು 90 ಅಡಿ ಅಗಲ. ಮನೆಯ ತಳಪಾಯ ಹಾಕುವಾಗಲೇ ಆ ಜಾಗವನ್ನು ಅಗೆದು ಹೊಂಡ ಮಾಡಿ ಕಪ್ಪು ಮಣ್ಣು, ಕೆಂಪು ಮಣ್ಣು, ಮರಳು ಇತ್ಯಾದಿಗಳನ್ನು ಹಾಕಿ ಸಮತಟ್ಟಾಗಿ ಸಿದ್ಧಗೊಳಿಸಿದ್ದರು.

ವೈದ್ಯ ವೃತ್ತಿಯ ಜತೆಗೆ ಮೃತ್ಯುಂಜಯ ಅವರಿಗೆ ಕೃಷಿಯಲ್ಲೂ ವಿಶೇಷ ಆಸಕ್ತಿ ಹೊಂದಿದ್ದಾರೆ. ಅವರ ಆಸಕ್ತಿಗೆ ಪೂರಕವಾಗಿ ದುಡಿಯುತ್ತಿರುವವರು ಪತ್ನಿ ಸುಧಾ. ಇಬ್ಬರೂ ಸೇರಿ ನಂದನವನವನ್ನೇ ಸೃಷ್ಟಿಸಿದ್ದಾರೆ. ಮನೆಯ ಮುಂಭಾಗದಲ್ಲಿ ನೂರಾರು ಬಗೆಯ ವಿದೇಶಿ ಪುಷ್ಪಗಳು, ಬಲಭಾಗದಲ್ಲಿ ವಿದೇಶೀ ಹಣ್ಣಿನ ಗಿಡಗಳು, ಎಡಭಾಗದಲ್ಲಿ ಹಣ್ಣುಗಳ ಜತೆಗೆ ಔಷಧೀಯ ಗಿಡಗಳ ಸಂಭ್ರಮ.

ಜಗತ್ತಿನ ಬಹುತೇಕ ದೇಶಗಳಲ್ಲಿ ಪ್ರವಾಸ ಮಾಡಿರುವ ಮೃತ್ಯುಂಜಯ ಅವರು ಅಲ್ಲಿಯ ಪ್ರವಾಸಿ ಕೇಂದ್ರಗಳಿಗಿಂತ ಹೆಚ್ಚಾಗಿ ಹಣ್ಣು ಹೂವು ಬೆಳೆಯುವ ಕ್ಷೇತ್ರಗಳಿಗೇ ಹೆಚ್ಚು ಭೇಟಿ ಕೊಟ್ಟಿದ್ದಾರೆ. ಅಮೆರಿಕ, ಆಸ್ಟ್ರೇಲಿಯಾ, ಇಂಗ್ಲೆಂಡ್, ಆಫ್ರಿಕಾದ ಹಲವು ದೇಶಗಳಿಗೆ ಅವರು ಭೇಟಿ ಕೊಟ್ಟಿದ್ದಾರೆ. 'ಅಲ್ಲಿ ಸಿಗುವ ಅಲಂಕಾರಿಕ ಗಿಡಗಳ ಬಗ್ಗೆಯೂ ಸಾಕಷ್ಟು ವಿವರಗಳನ್ನು ತಿಳಿದುಕೊಂಡು ಬಹುತೇಕ ಎಲ್ಲ ದೇಶಗಳಿಂದಲೂ ಗಿಡಗಳನ್ನು ತಂದು ಇಲ್ಲಿ ನೆಟ್ಟಿದ್ದೇನೆ' ಎನ್ನುತ್ತಾರೆ ಅವರು.

ಅವರು ವಿದೇಶಗಳಿಂದ ತಂದಿರುವ ಗಿಡಗಳ ಸಂಖ್ಯೆ ಸುಮಾರು 102. ಅವುಗಳಲ್ಲಿ ಅತ್ಯಂತ ಪ್ರಮುಖವಾದದ್ದು ಮೈಟ್ರಾಸಿಯಾಸ್ ಕುಟುಂಬಕ್ಕೆ ಸೇರಿದ ಸ್ಟಾರ್ ಫ್ರೂಟ್. ಅದರ ಒಳಗಿನ ತಿರುಳು ನಕ್ಷತ್ರದಂತಿದ್ದು ಆ ಹೆಸರು ಬಂದಿದೆ. ರೊಸಾಸಿಯಾ ಕುಟುಂಬಕ್ಕೆ ಸೇರಿದ ಫ್ಲಮ್, ರೌಟಾಸಿಯಾ ಕುಟುಂಬಕ್ಕೆ ಸೇರಿದ ಮೂಸುಂಬಿ ಮತ್ತು ಸಿಹಿಯಾದ ಲಿಂಬೆ ಗಿಡದಲ್ಲಿ ಹಣ್ಣುಗಳು ಗೊಂಚಲು ಗೊಂಚಲಾಗಿ ತುಂಬಿ ತುಳುಕುತ್ತಿವೆ. ಫ್ಲಾಕೋರ್ಟ್‌ಸಿಯಾ ಕುಟುಂಬಕ್ಕೆ ಸೇರಿದ ಲವಿಯಾ (ಲವ್ವಿ) ಎನ್ನುವ ಹಣ್ಣೊಂದಿದೆ. ಅದು ಹುಳಿ ಮಿಶ್ರಿತ ಸಿಹಿ ಹೊಂದಿದ್ದು ತಿಂದಾಗ ಅಪೂರ್ವ ಅನುಭವ ಉಂಟಾಗುತ್ತದೆ. ಶ್ರೀಲಂಕಾ, ಬ್ರೆಜಿಲ್, ತಾಂಜಾನಿಯಾಗಳಿಂದ ತಂದು ಬೆಳೆಸಿದ ಹಾಗೂ ದೇಶೀಯ ಪಪ್ಪಾಯಿ ಗಿಡಗಳಂತೂ ಹೇರಳವಾಗಿದೆ. ಅವರ ಮನೆಗೆ ಭೇಟಿ ನೀಡಿದಾಗ ಬೆಳಿಗ್ಗೆಯ ಉಪಹಾರದ ಬಳಿಕ ಅದೇ ಪಪ್ಪಾಯಿಯನ್ನು ಸವಿದೆ. ನಿಜಕ್ಕೂ ಅಪರೂಪದ ಸ್ವಾಭಾವಿಕ ಸಿಹಿಯದು.

ಸೈಟ್ರಸ್ ವರ್ಗಕ್ಕೆ ಸೇರಿದ ಸುಮಾರು 35 ವಿಧಧ ಹಣ್ಣುಗಳು ಈ ವೈದ್ಯರ ತೋಟದಲ್ಲಿ ಕಂಗೊಳಿಸುತ್ತಿದೆ. ಇಷ್ಟೊಂದು ವೈವಿಧ್ಯಮಯ ಬೆಳೆಗಳು ಒಂದೇ ಕಡೆಗೆ ಕಾಣಸಿಗುವುದು ಅಚ್ಚರಿಯೇ ಸರಿ. ಗಜನಿಂಬೆ, ಇಟಾಲಿಯನ್ ಲಿಂಬೆ, ಅರೇಬಿಯನ್ ಲಿಂಬೆ, ಬೀಜರಹಿತ ಲಿಂಬೆ, ತಿರುಳಿನಲ್ಲಿ ಗೆರೆಗಳಿರುವ ಹಾಗೂ ಎಲೆಯಲ್ಲಿ ಎರಡು ಬಣ್ಣ ಹೊಂದಿರುವ ಸಿಹಿಯಾದ ವೆರೆಗೇಟೆಡ್ ಮೂಸುಂಬಿ,